ದಿನಾಂಕ**: 02.09.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು**.**

ಪಾಟೀ ಸವಾಲು ವಾದಿ ಪರ ಶ್ರೀ ಕೆ ವೈ ಎನ್ ವಕೀಲರಿಂದಃ-

ನನಗೆ ಕನ್ನಡ ಓದಲು ಬರುತ್ತದೆ, ಆದರೆ ಬರೆಯಲು ಬರುವುದಿಲ್ಲ. ದಾವಾ ಸ್ವತ್ತು ನನಗೆ ಸರ್ಕಾರದಿಂದ 1996 ನೇ ಇಸವಿಯಲ್ಲಿ ಮಂಜೂರಾದ ಸ್ವತ್ತು ಎಂದರೆ ಸರಿ. ಮಂಜೂರಾದ ನಂತರ ರೆವೆನ್ಯೂ ದಾಖಲೆಗಳು ನನ್ನ ಹೆಸರಿನಲ್ಲಿ ಬಂದಿರುತ್ತದೆ ಎಂದರೆ ಸರಿ. ಆ ಪ್ರಕಾರವಾಗಿ ನಾನು ಸಾಗುವಳಿ ಚೀಟಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನನ್ನ ಗಂಡ ಮತ್ತು 4 ನೇ ಪ್ರತಿವಾದಿ ಇಬ್ಬರೂ ಅಣ್ಣತಮ್ಮಂದಿರು. ಗೋವಿಂದರೆಡ್ಡಿ ನನ್ನ ಮಾವ. ನನ್ನ ಗಂಡ ಮತ್ತು 4 ನೇ ಪ್ರತಿವಾದಿ ವಿಭಾಗವಾಗಿ ಸುಮಾರು 35 ವರ್ಷಗಳಾಗಿರುತ್ತವೆ, ಆದರೆ ಖಾತೆಯಾಗಿರುವುದಿಲ್ಲ. 2005 ನೇ ಇಸವಿಯಲ್ಲಿ ನನ್ನ ಗಂಡ ಮತ್ತು 4 ನೇ ಪ್ರತಿವಾದಿ ಒಟ್ಟಿಗೆ ಇದ್ದರು ಎಂದರೆ ಸರಿ. ಆ ಸಂದರ್ಭದಲ್ಲಿ ನಾನು, 2 ರಿಂದ 6 ನೇ ಪ್ರತಿವಾದಿಗಳು ವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತೀರಾ ಮತ್ತು ಅಗ್ರಿಮೆಂಟ್ ಬರೆದುಕೊಟ್ಟಿರುತ್ತೀರಾ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ತೀರಿಕೊಂಡು ಸುಮಾರು 12 ವರ್ಷಗಳಾಗಿರುತ್ತವೆ.

2. 2 ರಿಂದ 4 ನೇ ಪ್ರತಿವಾದಿಗಳು ವಿದ್ಯಾಭ್ಯಾಸ ಮಾಡಿಕೊಂಡಿರುತ್ತಾರೆ. ನಿಪಿ 11 ಮತ್ತು 12 ರಲ್ಲಿ ನನ್ನ ಸಹಿ ಇದೆ, ಆದರೆ ಅದನ್ನು ನಾನು ಮಾಡಿರುವುದಿಲ್ಲ. ದಿನಾಂಕ 05.11.2005 ರಲ್ಲಿ ನಾವುಗಳು ವಾದಿಗೆ ನಿಪಿ.11 ನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸಾಕ್ಷಿಯೂ ನಾನು ಬರೆದುಕೊಟ್ಟಿರುವುದಿಲ್ಲ, ಉಳಿದ ಪ್ರತಿವಾದಿಗಳು ಬರೆದುಕೊಟ್ಟಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಿಪಿ.11 ರ ಪ್ರಕಾರ ರೂ.1,33,500/- ಗಳಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿ ರೂ.33,500/- ಗಳನ್ನು ಮುಂಗಡವಾಗಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮಂಜೂರಾದ ಜಮೀನಾಗಿದ್ದು ಅದನ್ನು 15 ವರ್ಷಗಳ ಕಾಲ ಪರಭಾರೆ ಮಾಡಬಾರದು ಎಂಬ ಕಾರಣಕ್ಕಾಗಿ ನೊಂದಾಯಿಸದೇ ಅಗ್ರಿಮೆಂಟ್ ಮಾಡಿಕೊಟ್ಟಿದ್ದೇವು ಎಂದರೆ ಸರಿಯಲ್ಲ. ನಂತರ ದಿನಾಂಕ 31.11.2005 ರಲ್ಲಿ ನಾವುಗಳು ವಾದಿಯಿಂದ ಪುನಃ ರೂ.40,000/- ಗಳನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅದೇ ದಿನ ವಾದಿಗೆ 7 ಎಕರೆ 35 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸಾಕ್ಷಿಯೂ ನನ್ನ ಗಂಡ ಮಾಡಿರುವುದು ನನಗೆ

ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಮಾರಾಟ ಮಾಡಿದ ಆ ಜಮೀನಿನ ದಕ್ಷಿಣಕ್ಕೆ ಇರುವ ದಾವಾ ಸ್ವತ್ತನ್ನು ಸಹ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಉಳಿದ ಪ್ರತಿವಾದಿಗಳನ್ನು ಸಾಕ್ಷಿ ವಿಚಾರಣೆ ಮಾಡಲು ಯಾವುದೇ ಸಮಸ್ಯೆ ಇರುವುದಿಲ್ಲ. ನಾವುಗಳು ವಾದಿಗೆ ಜಮೀನನ್ನು ಮಾರಾಟ ಮಾಡಿದ್ದರೂ ಸಹ ಅಕ್ರಮವಾಗಿ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ಗಂಡನ ಜೀವಿತಾ ಕಾಲದಲ್ಲಿ ನಾವುಗಳು ಎಲ್ಲಾರೂ ಸೇರಿ ದಾವಾ ಸ್ವತ್ತನ್ನು ಮಾರಾಟ ಮಾಡಿ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನನ್ನ ಗಂಡ ಪಿ.ಎಲ್.ಡಿ ಬ್ಯಾಂಕ್ ನಲ್ಲಿ ಲೋನ್ ಪಡೆದುಕೊಂಡಿದ್ದರು ಎಂದರೆ ಸರಿ. ಸದರಿ ಲೋನ್ ನ ತೀರುವಳಿಗಾಗಿ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸಾಕ್ಷಿಯೂ ಇರಬಹುದು, ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ವಾದಿಯೂ ನೀಡಿದಂತಹ ಮುಂಗಡ ಹಣವನ್ನು ಬ್ಯಾಂಕಿಗೆ ಕಟ್ಟಿ ಬ್ಯಾಂಕಿನಿಂದ ಆದಾರ ಬಿಡುಗಡೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿ. ವಾದಿಗೆ ಆಸ್ತಿಯನ್ನು ನೀಡಬಾಕಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.